(21) ಕರ್ನಾಟಕ ಪ್ರದೇಶ ಕುರುಬರ ಸಂಘದ ಕಾಗಿನೆಲೆ ಸಂಸ್ಥಾನ ಪೀಠ, ಹಾವೇರಿ.

ಮೇಲ್ಕಂಡ ಅರ್ಜಿಗಳು ಈಗಾಗಲೇ ಶಿಫಾರಸ್ಸು ಮಾಡಿರುವ 15 ಕಾಲೇಜುಗಳ ಅರ್ಜಿಗಳನ್ನು ಒಳಗೊಂಡಿರುವುದಿಲ್ಲ.

ಇ) ಪ್ರೋ : ಎಂ.ಐ. ಸವದತ್ತಿ ನೇತೃತ್ವದ ತಜ್ಞರ ಸಮಿತಿಯ ಶಿಫಾರಸ್ಸನ್ನು ಆಧರಿಸಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ನೀಡಿದ ವರದಿಯನ್ನು ಪರಿಗಣಿಸಿ ನೂತನ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಅನುಮೋದನೆಗೆ ಎಐಸಿಟಿಇ ಗೆ ಶಿಫಾರಸ್ಸು ಮಾಡಲಾಗಿದೆ.

ಗುತ್ತಿಗೆ ಆಧಾರದ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ವೇತನ ಕಡಿತ

1527 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ 1991ರಲ್ಲಿ ಖಾಯಂಗೊಂಡ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ವಾರ್ಷಿಕ ವೇತನವನ್ನು ಕಡಿತಗೊಳಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ರೀತಿ ಕಡಿತಗೊಳಿಸಲು ಕಾರಣಗಳೇನು?

ಇ) ರಾಜ್ಯ ಸರ್ಕಾರ ಈ ರೀತಿ ಮಾನವೀಯ ದೃಷ್ಟಿಯಿಂದ ಇಂತ : ಅವೈಜ್ಞಾನಿಕ ಹಾಗೂ ಅನ್ಯಾಯಯುತವಾದ ಆದೇಶವನ್ನು ಹಿಂತೆಗೆದುಕೊಳ್ಳಲು ಯೋಜಿಸಿದೆಯೇ? ಹಾಗಿದ್ದಲ್ಲಿ ಯಾವಾಗ ಹಿಂತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು).

ಅ) ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಪಿಎಆರ್ - 12 ಎಸ್ಆರ್ಇ-97 ದಿನಾಂಕ : 9-6-97 ರಲ್ಲಿ 1991ರಲ್ಲಿ ಖಾಯಂಗೊಂಡ ಗುತ್ತಿಗೆ ಆಧಾರದ ಶಿಕ್ಷಕರು ಹಾಗೂ ಉಪನ್ಯಾಸಕರ ಪ್ರಾರಂಭಿಕ ಮೂಲ ವೇತನವನ್ನು ಸದರಿ ನೌಕರರು ವಿಲೀನ ಹೊಂದುವ ಹುದ್ದೆಯ ಕನಿಷ್ಠ ಹಂತಕ್ಕೆ, ಅವರು ವಿಲೀನಗೊಂಡ ದಿನಾಂಕದಿಂದ ನಿಗದಿಪಡಿಸಲು ಸಂಬಂಧಪಟ್ಟ ನಿಯಮಾವಳಿಗಳಿಗೆ ತಿದ್ದುಪಡಿ ಹೊರಡಿಸಲು ಕರಡು ನಿಯಮಾವಳಿಗಳನ್ನು ಹೊರಡಿಸಲಾಗಿದೆ.

ಆ) ಗುತ್ತಿಗೆ ಆಧಾರಿತ ನೌಕರರು ಶಿಕ್ಷಣ ಇಲಾಖೆಯಲ್ಲಿಲ್ಲದೆ ಸರ್ಕಾರದ ವಿವಿಧ ಇಲಾಖೆಗಳಲ್ಲೂ ಇದ್ದು ಅವರುಗಳನ್ನು ಸೇವಾ ಸಕ್ರಮಗೊಳಿಸಲು, ಸರ್ಕಾರವು ಬೇರೆ ಬೇರೆ ಇಲಾಖೆಗಳಲ್ಲಿ ಬೇರೆ ಬೇರೆ ವಿಶೇಷ ನಿಯಮಾವಳಿಗಳನ್ನು ಹೊರಡಿಸಲಾಗಿದ್ದು, ಈ ಎಲ್ಲಾ ನಿಯಮಗಳಿಗೆ ಸಂಬಂಧಿಸಿದಂತೆ ಏಕರೂಪದ ನಿಯಮವನ್ನು ಜಾರಿಗೊಳಿಸುವ ಉದ್ದೇಶದಿಂದ ಈ ರೀತಿ ಕ್ರಮ ಜರುಗಿಸಲಾಗಿದೆ.

ಇ) ದಿನಾಂಕ : 9-6-97 ರಂದು ಹೊರಡಿಸಿರುವ ಈ ಕರಡು ವಿಶೇಷ ತಿದ್ದುಪಡಿ ನಿಯಮಾವಳಿಗಳಿಗೆ ಆಕ್ಷೇಪಣೆಗಳು ಸ್ವೀಕೃತವಾಗಿದ್ದು ಇವು ಪರಿಶೀಲನೆಯಲ್ಲಿವೆ.

ರಾಜ್ಯದಲ್ಲಿ ಅರಣ್ಯ ಬೆಳೆಸುವ ಸಮಗ್ರಯೋಜನೆ

1528 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಅರಣ್ಯ ಬೆಳೆಸುವ ಸಮಗ್ರ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಯೋಜನೆಗಾಗಿ ರಾಜ್ಯ ಸರ್ಕಾರವು ಎಷ್ಟು ಹಣ ಖರ್ಚು ಮಾಡಿದೆ. ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಿದೆ. ಇದಕ್ಕಾಗಿ ವಿದೇಶಿ ನೆರವನ್ನೇನಾದರೂ ಪಡೆಯಲಾಗಿದೆಯೇ?*

ಇ) *ಹಾಗಿದ್ದಲ್ಲಿ ವಿದೇಶದಿಂದ ಎಷ್ಟು ಹಣ ಪಡೆಯಲಾಗುತ್ತಿದೆ. ಈ ಹಣವನ್ನು ಸಾಲವಾಗಿ ಪಡೆಯುತ್ತಿದೆಯೇ? ಅಥವಾ ಸಹಾಯ ಧನವಾಗಿ ಪಡೆಯುತ್ತಿದೆಯೇ? ಸಾಲವಾಗಿದ್ದಲ್ಲಿ ಈ ಹಣವನ್ನು ತೀರಿಸುವ ಬಗ್ಗೆ ಇದಕ್ಕೆ ಸಂಬಂಧಪಟ್ಟ ವಿವರ ನೀಡುವುದು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಹೌದು

ಆ) ಕರ್ನಾಟಕದಲ್ಲಿ ದೇಶಿಯ ಮತ್ತು ವಿದೇಶಿಯ ನೆರವಿನಡಿಯಲ್ಲಿ ವಿವಿಧ ಅರಣ್ಯೀಕರಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಅರಣ್ಯೀಕರಿಸಿದ ಪ್ರದೇಶದ ವಿಸ್ತೀರ್ಣ ಮತ್ತು ಖರ್ಚು ಮಾಡಿದ ಹಣದ ವಿವರ ಕೆಳಕಂಡಂತಿದೆ.

ವರ್ಷ	ಅರಣ್ಯೀಕರಿಸಿದ ಪ್ರದೇಶ	ಖರ್ಚು ಮಾಡಿದ ಹಣ
	(ಹೆಕ್ಟೇರುಗಳಲ್ಲಿ)	(ರೂ. ಲಕ್ಷಗಳಲ್ಲಿ)
94-95	58,492	7162.098
95-96	65,712	8502.865
96-97	60,636	7945.943

ಬ್ರೀಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ವಿದೇಶಿ ನೆರವಿನಿಂದ ಪಶ್ಚಿಮ ಘಟ್ಟದ ಅರಣ್ಯೀಕರಣ ಮತ್ತು ಪರಿಸರ ಯೋಜನೆಯಡಿ ಪಡೆಯಲಾದ ಹಾಗೂ ವೆಚ್ಚ ಮಾಡಿದ ಹಣದ ವಿವರಗಳು ಈ ಕೆಳಗಿನಂತಿದೆ.

ವರ್ಷ	ನಿಗದಿಪಡಿಸಿದ ಹಣ (ರೂ. ಲಕ್ಷಗಳಲ್ಲಿ)	ವೆಚ್ಚ ಮಾಡಿದ ಹಣ (ರೂ. ಲಕ್ಷಗಳಲ್ಲಿ)
1) 1992-93	729.00	453.490
2) 1993-94	1124.00	1027.645
3) 1994-95	1366.00	1300.507
4) 1995-96	1500.00	1492.378
5) 1996-97	1800.00	1573.000
6) 1997-98	1070.03	96.270

1996-97ನೇ ಸಾಲಿನಿಂದ 2001-2002 ನೇ ಇಸವಿಯವರೆಗೆ ಜಪಾನಿನ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಯ ನೆರವಿನಿಂದ ರಾಜ್ಯದಲ್ಲಿ ಕರ್ನಾಟಕ ಪೂರ್ವ ಪ್ರದೇಶಗಳ ಅರಣ್ಯೀಕರಣ ಮತ್ತು ಪರಿಸರ ಯೋಜನೆ ಎಂಬ ಹೊಸ ಯೋಜನೆಯನ್ನು ಒಟ್ಟು 138 ತಾಲ್ಲೂಕುಗಳಲ್ಲಿ. ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯ ಒಟ್ಟು ಮೊತ್ತ ರೂ. 598.28 ಕೋಟಿ ರೂಪಾಯಿಗಳು. ಇದರಲ್ಲಿ ರಾಜ್ಯ ಸರ್ಕಾರ ಭರಿಸಬೇಕಾದ ವೆಚ್ಚ 125.90 ಕೋಟಿ ರೂಪಾಯಿಗಳು.

ಇ) ಪಶ್ಚಿಮಘಟ್ಟ ಯೋಜನೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಶೇಕಡಾ 30 ರಷ್ಟು ಸಹಾಯ ಧನವಾಗಿಯು ಮತ್ತು ಶೇಕಡ 70 ರಷ್ಟು ಹಣವನ್ನು ಶೇಕಡಾ 9.8 ರಂತೆ ಬಡ್ಡಿ ಸೇರಿಸಿ 15 ವರ್ಷಗಳ ಅವಧಿಯಲ್ಲಿ ಮರು ಪಾವತಿ ಮಾಡಲು ಒಡಂಬಡಿಕೆಯಾಗಿದೆ. ಜಪಾನಿನ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಯಿಂದ 5 ವರ್ಷಗಳ ಅವಧಿಯ ಈ ಯೋಜನೆಗೆ ಪಡೆಯಲಾಗುತ್ತಿರುವ ವಿದೇಶಿ ಸಾಲವು 472.38 ಕೋಟಿ ರೂಪಾಯಿಗಳು. ಭಾರತ ಸರ್ಕಾರವು ಜಪಾನ್ ದೇಶದ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಗೆ ಮೇಲ್ಕಂಡ ಸಾಲಕ್ಕೆ ಪಾವತಿಸಬೇಕಾದ ಬಡ್ಡಿ ಶೇಕಡ 2.1. ಭಾರತ ಸರ್ಕಾರವು ರಾಜ್ಯ ಸರ್ಕಾರಕ್ಕೆ ಶೇಕಡ 70 ರಷ್ಟು ಮೊತ್ತವನ್ನು ಸಾಲದ ರೂಪದಲ್ಲಿ ಹಾಗೂ ಶೇ. 30 ರಷ್ಟು ಮೊತ್ತವನ್ನು ಅನುದಾನದ ರೂಪದಲ್ಲಿ ನೀಡುವುದು. ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡುವ ಸಾಲದ ಬಡ್ಡಿ ದರ ಶೇಕಡ 12 ರಷ್ಟಾಗಿದೆ. ಈ ಯೋಜನೆಗಾಗಿ ಪಡೆದ ಸಾಲವನ್ನು ಭಾರತ ಸರ್ಕಾರವು ಯೋಜನೆಯ 11ನೇ ವರ್ಷದಿಂದ ಪ್ರಾರಂಭಿಸಿ ಮುಂಬರುವ 30 ವರ್ಷಗಳಲ್ಲಿ 36.15 ಕೋಟಿ ರೂಪಾಯಿಗಳ ಬಡ್ಡಿ ಸಮೇತ ಒಟ್ಟು ರೂ. 508.53 ಕೋಟಿ ರೂಪಾಯಿಗಳನ್ನು ಮಾರುಪಾವತಿ ಮಾಡಬೇಕಾಗಿದೆ.

ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಖಾಲಿ ಹುದ್ದೆಗಳು

1529 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?